ಅ) ಭೀಮಾ ನದಿಗೆ ನಿರ್ಮಾಣಗೊಂಡಿರುವ ಬ್ಯಾರೇಜ್‌ಗಳು ಎಷ್ಟು;

ಕೃಷ್ಣಾ ಭಾಗ್ಯ ಜಲ ನಿಗಮದಡಿ ಭೀಮಾ ನದಿಗೆ ಅಡ್ಡಲಾಗಿ 5 ಬ್ಯಾರೇಜುಗಳ ನಿರ್ಮಾಣ ಕೈಗೆತ್ತಿಕೊಳ್ಳಲಾಗಿದೆ ಹಾಗೂ ಸಣ್ಣ ನೀರಾವರಿ ಇಲಾಖೆಯಿಂದ ಭೀಮಾ ನದಿಗೆ ಅಡ್ಡಲಾಗಿ ಇದುವರೆಗೆ ಬಿಜಾಪುರ ಜಿಲ್ಲೆಯಲ್ಲಿ 6 ಮತ್ತು ಗುಲ್ಬರ್ಗಾ ಜಿಲ್ಲೆಯಲ್ಲಿ 2 ಬ್ಯಾರೇಜ್‌ಗಳನ್ನು ನಿರ್ಮಿಸಲಾಗಿದೆ.

ಆ) ಇಂಡಿ ಬ್ರಾಂಚ್ ಕ್ಯಾನೆಲ್‌ನಿಂದ ಈ ಬ್ಯಾರೇಜುಗಳಿಗೆ ನೀರು ಹಾಯಿಸಲು ಸರ್ಕಾರ ಯೋಜಿಸಿದೆಯೇ;

ಇಲ್ಲ

ಇ) ಹಾಗಿದ್ದಲ್ಲಿ, ಈ ವಿಷಯದ ಬಗ್ಗೆ ಸರ್ಕಾರದ ನಿಲುವೇನು?

ಉದ್ಭವಿಸುವುದಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (355)120

ಸದಸ್ಯರ ಹೆಸರು : ಶ್ರೀ ಅಪ್ಪಾಜಿ ಚನ್ನಬಸವರಾಜ್ ಶಂಕರರರಾವ್‌ನಾಡಗೌಡ.

ಉತ್ತರಿಸುವ ಸಚಿವರು : (ಶ್ರೀ ಬಸವರಾಜ್ ಬೊಮ್ಮಾಯಿ) ಜಲ ಸಂಪನ್ಮೂಲ ಸಚಿವರು

ಅ) ಆಲಮಟ್ಟಿ ಎಡದಂಡೆ ಕಾಲುವೆಯ 18ನೇ ಮತ್ತು 21ನೇ ನೀರಿನ ವಿತರಣೆ ಕಾಲುವೆಯಿಂದ ರೈತರ ಜಮೀನುಗಳಿಗೆ ನೀರು ಪೂರೈಕೆ ಮಾಡುವ ಕಾರ್ಯವು ಯಶಸ್ವಿಯಾಗಿದೆಯೆ;

ಆಲಮಟ್ಟಿ ಎಡದಂಡೆ ಕಾಲುವೆಯ 18ನೇ ಮತ್ತು 21ನೇ ವಿತರಣಾ ಕಾಲುವೆಗಳಲ್ಲಿ 2004-05ನೇ ಸಾಲಿನಿಂದ ನೀರನ್ನು ಬಿಡಲಾಗುತ್ತಿದ್ದು, ನಿಗದಿತ ಪ್ರಮಾಣದಲ್ಲಿ ಕಾಲುವೆ ಕೊನೆಯ ಅಂಚಿನವರೆಗೂ ತಲುಪಿಸಲು ಸಾಧ್ಯವಾಗಿರುವುದಿಲ್ಲ.

ಆ) ಹಾಗಿಲ್ಲದಿದ್ದಲ್ಲಿ, ಇದಕ್ಕೆ ಕಾರಣಗಳೇನು;

ಈ ಕೆಳಕಂಡ ಕಾರಣಗಳಿಂದ ಕಾಲುವೆ ಕೊನೆಯ ಅಂಚಿನವರೆಗೂ ತಲುಪಿಸಲು ಸಾಧ್ಯವಾಗಿರುವುದಿಲ್ಲ.

1. ಮಳೆ ನೀರಿನ ಕೊರೆತದಿಂದ ಕಾಲುವೆಯಲ್ಲಿ ಅಲ್ಲಲ್ಲಿ ಹೂಳು ತುಂಬಿದ್ದರಿಂದ.
2. ರೈತರು ಅನಧಿಕೃತವಾಗಿ ಕಾಲುವೆಯ ಸೇವಾ ರಸ್ತೆಯನ್ನು ಒಡೆದು ನೀರನ್ನು ತಮ್ಮ ಹೊಲಗಳಿಗೆ ಹಾಯಿಸಿಕೊಂಡಿದ್ದರಿಂದ.

3. ಮೇಲ್ಭಾಗದ ರೈತರು ನೀರನ್ನು ಹೆಚ್ಚಿಗೆ ಬಳಸಿರುವುದರಿಂದ.

ಇ) 18ನೇ ಮತ್ತು 21ನೇ ನೀರಿನ ವಿತರಣಾ ಕಾಲುವೆಯಿಂದ ರೈತರ ಜಮೀನುಗಳಿಗೆ ನೀರನ್ನು ಸಮರ್ಪಕವಾಗಿ ವಿತರಣೆ ಮಾಡುವ ವ್ಯವಸ್ಥೆಯನ್ನು ಸರ್ಕಾರವು ಯಾವ ರೀತಿ ಕೈಗೊಳ್ಳಲಿದೆ ಹಾಗೂ ಎಷ್ಟು ದಿನಗಳೊಳಗಾಗಿ ಅನುಷ್ಠಾನಗೊಳಿಸಲಾಗುವುದು?

ಈ ಸಾಲಿನ ಕ್ಲೋಜರ್ ಅವಧಿಯಲ್ಲಿ ಕಾಲುವೆಗಳಲ್ಲಿ ತುಂಬಿದ್ದ ಹೂಳನ್ನು ತೆಗೆಸಲಾಗಿದ್ದು, ಅಲ್ಲಲ್ಲಿ ಹಾನಿಗೊಳಗಾದ ಸೇವಾ ರಸ್ತೆಯನ್ನು ಸಹ ದುರಸ್ತಿಗೊಳಿಸಲಾಗಿದೆ. ಮೇಲ್ಭಾಗದ ರೈತರಿಗೆ ಮನವರಿಕೆಯನ್ನು ಮಾಡಿ, 18ನೇ ಮತ್ತು 21ನೇ ಕಾಲುವೆಯ ಕೊನೆಯ ಅಂಚಿನವರೆಗೂ ನೀರನ್ನು ಇದೇ ಮುಂಗಾರು ಹಂಗಾಮಿಗೆ ಹರಿಸಲು ಕ್ರಮ ಜರುಗಿಸಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**(356)121**
ವಿದಾನ ಸಭಾ ಸದಸ್ಯರ ಹೆಸರು	:	**ಶ್ರೀ ಅಪ್ಪಾಜಿ ಚನ್ನಬಸವರಾಜ್ ಶಂಕರ್ ರಾವ್ ನಾಡಗೌಡ**
ಉತ್ತರಿಸುವ ಸಚಿವರು	:	**(ಶ್ರೀ ಬಸವರಾಜ್ ಬೊಮ್ಮಾಯಿ) ಜಲಸಂಪನ್ಮೂಲ ಸಚಿವರು**

ಅ) ಆಲಮಟ್ಟಿಯಿಂದ ಮುದ್ದೇಬಿಹಾಳದವರೆಗೆ ಹಾಗೂ ಮುದ್ದೇಬಿಹಾಳದಿಂದ ನಾರಾಯಣಪುರದವರೆಗೆ ನೀರಾವರಿ ಇಲಾಖೆಗೆ ಸೇರಿದ ಮುಖ್ಯರಸ್ತೆಯು ಎರಡು ವರ್ಷಗಳಿಂದ ಸಂಪೂರ್ಣ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಸರ್ಕಾರದ ಗಮನಕ್ಕೆ ಬಂದಿದೆ.

ಆ) ಹಾಗಿದ್ದಲ್ಲಿ, ಈವರೆವಿಗೂ ಇದನ್ನು ಸರಿಪಡಿಸಲು ಯಾವುದೇ ಕ್ರಮ ತೆಗೆದುಕೊಳ್ಳದಿರುವುದಕ್ಕೆ ಕಾರಣವೇನು;

ಆಲಮಟ್ಟಿ-ಮುದ್ದೇಬಿಹಾಳ ಹಾಗೂ ಮುದ್ದೇಬಿಹಾಳ-ನಾರಾಯಣಪುರ ರಸ್ತೆಗಳು ಮೂಲತಃ ಲೋಕೋಪಯೋಗಿ ಇಲಾಖೆಯ ಒಡೆತನಕ್ಕೆ ಸೇರಿದ್ದು, ಕೃಷ್ಣಾ ಮೇಲ್ದಂಡೆ ಯೋಜನೆಯ ವ್ಯಾಪ್ತಿಯಲ್ಲಿ ಕಾಮಗಾರಿಗಳ ಸಮರ್ಪಕ ನಿರ್ವಹಣೆಗಾಗಿ ಸೂಕ್ತ ಸಂಚಾರ ವ್ಯವಸ್ಥೆ ಹೊಂದಬೇಕಾಗಿರುವ ದೃಷ್ಟಿಯಿಂದ ಸದರಿ ರಸ್ತೆಗಳನ್ನು ಕೃಷ್ಣಾ ಮೇಲ್ದಂಡೆ ಯೋಜನೆಯ ವ್ಯಾಪ್ತಿಗೆ ಹಸ್ತಾಂತರಿಸಿಕೊಳ್ಳಲಾಗಿತ್ತು.

ದಿನಾಂಕ 28.12.2007 ರಂದು 72ನೇ ಕೃಭಾಜನಿನಿ ನಿರ್ದೇಶಕರ ಮಂಡಳಿ ಸಭೆಯಲ್ಲಿ ನಿಗಮದ ವ್ಯಾಪ್ತಿಯಲ್ಲಿ ಬರುವ ರಸ್ತೆಗಳನ್ನು ಮಾತೃ ಇಲಾಖೆಗೆ ಕನಿಷ್ಟ ದುರಸ್ತಿ ವೆಚ್ಚದೊಂದಿಗೆ ಹಸ್ತಾಂತರಿಸಲು ನಿರ್ಣಯ ಕೈಗೊಳ್ಳಲಾಗಿರುತ್ತದೆ.